# ಕುಮಾರನ ಶೋಧನೆಗಳು

## ಎಡ್ಡಿ ಕ್ಲೋಯೆರ್

ನಮ್ಮ ಕರ್ತನ ಬಾಪ್ತಿಸ್ಮದ ನಂತರದ ಸಂಗತಿಗಳು ನಮಗೆ ಆಶ್ಚರ್ಯವನ್ನು ಉಂಟುಮಾಡುತ್ತವೆ. ಆತನು ಕೂಡಲೇ ಬೋಧನೆಯ ತನ್ನ ಸೇವೆಯಲ್ಲಿ ಪ್ರವೇಶಿಸಿದನು ಎಂದು ಓದುವದನ್ನು ನಿರೀಕ್ಷಿಸುತ್ತೇವೆ. ಆದರೆ ಅದು ಹಾಗಿರುವದಿಲ್ಲ. ಅದರ ಬದಲು ಆತನು ಪ್ರತ್ಯೇಕವಾದ ಸ್ಥಳವನ್ನು ಪ್ರವೇಶಿಸಿದನು. ನಜರೇತಿನಲ್ಲಿ ಆತನು ತಿಳಿದದ್ದಕ್ಕಿಂತ ಹೆಚ್ಚು ಸಂಪೂರ್ಣವಾದ ಏಕಾಂತದಲ್ಲಿ ಹೋದನು. ಅರಣ್ಯವು ಆತನ ಮನೆಯಾಯಿತು. ಹಾಗೂ ಕಾಡು ಮೃಗಗಳು ಆತನ ಜೊತೆಗಾರರಾದವು (ಮಾರ್ಕ 1:12, 13). ಈ ಏಕಾಂತದಲ್ಲಿ ಕಠಿಣವಾದ ಹೋರಾಟ ನಡೆಯಿತು. ಯೇಸುವು ಸೈತಾನನಿಂದ ಶೋಧಿಸಲ್ಪಟ್ಟಂತೆ ಪರಲೋಕ ಭೂಲೋಕವು ಸಂಘರ್ಷಕ್ಕಿಳಿದವು.

ಯೇಸುವಿನ ಶೋಧನೆಯು "ಪರೀಕ್ಷೆ" ಎಂದು ಹೇಳಲ್ಪಟ್ಟಿದೆ, ಯಾಕಂದರೆ ಶೋಧನೆಯು ಸೈತಾನನ ಆಹ್ವಾನಕ್ಕೆ ಉತ್ತರ ಕೊಡುವ ಒಳಗಿನಿಂದ ಬರುವ ದುಷ್ಟ ಅಪೇಕ್ಷೆಯನ್ನು ಒಳಗೊಂಡಿರುತ್ತದೆ (ಯಾಕೋಬ 1:10-12). ಯೇಸುವು ಅಂಥ ಅಪೇಕ್ಷೆಯನ್ನು ವ್ಯಕ್ತಪಡಿಸದಿದ್ದರೂ ಆತನ ಶೋಧನೆಗಳು ಆತನ ಮಾನವತೆಯ ತೀಕ್ಷ ಚಿತ್ರವನ್ನು ನಮಗೆ ಕೊಡುತ್ತವೆ. ಪರಿಶುದ್ಧಾತ್ಮನು ಶೋಧನೆಗಳ ಮೂರು ವಿವರಣೆಗಳನ್ನಿಡುತ್ತಾನೆ (ಮತ್ತಾಯ 4:1-11; ಲೂಕ 4:2-13; ಮಾರ್ಕ 1:12, 13).[1] ಮಾರ್ಕನ ವೃತ್ತಾಂತವು ಬಹಳ ಸಂಕ್ಷೇಪವಾಗಿದ್ದು ಇದೊಂದು ವೃತ್ತಾಂತವಾಗಿರದೇ ಹೆಚ್ಚಾಗಿ ಒಂದು ಸೂಚನೆಯಂತೆ ಇರುತ್ತದೆ. ಆದರೆ ಯೇಸುವು ಕಾಡು ಮೃಗಗಳ ಮಧ್ಯದಲ್ಲಿ ಇದ್ದನು ಎಂದು ಮಾರ್ಕನು ಕೂಡಿಸಿದ್ದಾನೆ. ಯೇಸುವು ತನ್ನ ಜೀವನದ ಸಮಯದಲ್ಲಿ ಅನೇಕ ಸಲ ಶೋಧಿಸಲ್ಪಟ್ಟನು, ಆದರೆ ಸೈತಾನನು ಯೇಸುವಿನ ಜೀವನದ ಈ ಹಂತದಲ್ಲಿ ಯೇಸುವು ಪಾಪ ಮಾಡುವಂತೆ ಪ್ರಚೋದಿಸಲು ವಿಶೇಷ ಪ್ರಯತ್ನ ಮಾಡಿರಬೇಕು. ಬಹುಶಃ ಶೋಧನೆಯು ನಲ್ವತ್ತು ದಿನಗಳ ಅವಧಿಯ ಅಂತ್ಯದಲ್ಲಿ ಅತೀ ಬಲವಾದ ಪರೀಕ್ಷೆಗಳು ಬರುವದರೊಂದಿಗೆ ಎಲ್ಲಾ ನಲ್ವತ್ತು ದಿನಗಳಲ್ಲಿಯೂ ಯೇಸುವು ಶೋಧನೆಗಳಿಗೆ ಒಳಪಟ್ಟಿರಬೇಕು.[2]

ಶೋಧನೆಯ ಅನುಭವವು ಆತನ ಬಾಪ್ತಿಸ್ಮವಾದ ಕೂಡಲೇ ಆಯಿತು. "ಹಾಗೂ ಕೂಡಲೇ ಆತನು ಅಡವಿಗೆ ಹೋಗುವಂತೆ ಆತನನ್ನು ಆತ್ಮನು ಪ್ರೇರೇಪಿಸಿದನು" ಎಂದು ಮಾರ್ಕ 1:12 ಹೇಳುತ್ತದೆ. ಅಡವಿಯೊಳಗೆ ಹೋಗುವ ಪ್ರಚೋದನೆಯು ದೇವರದಾಗಿತ್ತೇ ಹೊರತು ಸೈತಾನನದಾಗಿರಲಿಲ್ಲ.[3] "ಯೊರ್ದನಿನ ಬಳಿಯಲ್ಲಿ ಪರಲೋಕದ ಒಪ್ಪಿಗೆಯ ನಂತರ, ನರಕದ ದಾಳಿಯು ಬಂದಿತು; ಪಾರಿವಾಳದ ನಂತರ ಸೈತಾನನು ಬಂದನು."[4] ಹಾಗೆಯೇ, ಹೊಸ ಕ್ರೈಸ್ತನು ಕ್ರಿಸ್ತನೊಳಗೆ ತನ್ನ ಬಾಪ್ತಿಸ್ಮದ ನಂತರ ಶೋಧನೆಗಳನ್ನು ಎದುರಿಸಲು ಸಿದ್ಧನಾಗಿರತಕ್ಕದ್ದು - ನಾಸ್ತಿಕರು ಅನುಭವಿಸದೇ ಇರುವ ಶೋಧನೆಗಳನ್ನು ಕ್ರೈಸ್ತರು ಎದುರಿಸುವರು.

ಈ ಶೋಧನೆಗಳ ಸರಣಿಯ ನಂತರ ಸೈತಾನನು "ಸಮಯ ಬರುವವರೆಗೆ" ಆತನನ್ನು ಬಿಟ್ಟುಹೋದನು ಎಂದು ಲೂಕ 4:13 ಹೇಳುತ್ತದೆ. ಈ ಶೋಧನೆಗಳ ನಂತರ ಯೇಸುವಿಗೆ ಅಲ್ಪಕಾಲ ಶೋಧಕನಿಂದ ವಿಶ್ರಾಂತಿಯಿತ್ತೆಂದು ಅರ್ಥವಾಗುತ್ತದೆ.

ಇದಲ್ಲದೆ ಸೈತಾನನು ಬೇರೆ ಸಮಯಗಳಲ್ಲಿ ಆತನನ್ನು ಶೋಧಿಸಲು ಹಿಂದಿರುಗಿ ಬಂದನು ಎಂದು ಅರ್ಥವಾಗುತ್ತದೆ.

*ಯೇಸುವು ಯಾಕೆ ಶೋಧಿಸಲ್ಪಟ್ಟನು?* ಯೇಸುವು ಈ ಲೋಕದೊಳಗೆ ಬಂದು ಮನುಷ್ಯನಂತೆ ಶೋಧಿಸಲ್ಪಡಬೇಕೆಂಬುದು ದೈವಿಕ ಯೋಜನೆಯಾಗಿತ್ತು. ಯೇಸುವು ಯಾಕೆ ಶೋಧಿಸಲ್ಪಟ್ಟನು ಎಂಬುದಕ್ಕೆ ಪರಿಶುದ್ಧ ಬರಹಗಳು ಎರಡು ಮೂಲ ಕಾರಣ ಗಳನ್ನು ಕೊಡುತ್ತವೆ.

ಮೊದಲನೆಯದು, ಆತನು ನಮ್ಮ ಹೋರಾಟಗಳೊಂದಿಗೆ ಸಂಪೂರ್ಣವಾಗಿ ಸಹಾನು ಭೂತಿ ತೋರಿಸುವಂತೆ ಆತನು ಶೋಧಿಸಲ್ಪಟ್ಟನು (ಇಬ್ರಿಯ 4:15; 2:15-18). ಎಲ್ಲಾ ವಯಸ್ಸಿನ ಪುರುಷರಿಂದಲೂ ಸ್ತ್ರೀಯರಿಂದಲೂ ಎದುರಿಸಲ್ಪಡುವ ಶೋಧನೆ ಗಳನ್ನು ಯೇಸುವು ತಿಳಿದುಕೊಂಡಿದ್ದನು ಎಂದು ಇದರ ಅರ್ಥವಾಗುವುದೋ? (versus.) ಸ್ಪಷ್ಟ ವಾಗಿಯೂ ಆತನು ತಿಳಿದಿರಲಿಲ್ಲ. ಆದರೆ ತಾತ್ವಿಕವಾಗಿ ಆತನು ನಾವು ಎದುರಿಸುವ ಪ್ರತಿಯೊಂದು ಶೋಧನೆಯನ್ನು ಎದುರಿಸಿದನು, ಮಾನವ ಸ್ವಾಭಾವವನ್ನು ತಲುಪುವ ಪ್ರತಿಯೊಂದು ಮಾರ್ಗದಲ್ಲಿಯೂ ಪೂರ್ಣ ಒತ್ತಡದೊಂದಿಗೆ ಶೋಧನೆಯು ಆತನ ಮೇಲೆ ಮುತ್ತಿಕೊಂಡಿತು. ನಾವು ಶೋಧನೆಯ ಪೂರ್ಣ ಬಲವನ್ನು ಅನುಭವಿಸಿರುವದಿಲ್ಲ. ನಾವು ಮೊದಲು ಶೋಧಿಸಲ್ಪಟ್ಟಾಗ ನಾವು ಅದಕ್ಕೆ ಒಳಗಾದೆವು. ಯೇಸುವು ಎಂದೂ ಶೋಧ ನೆಗೆ ಒಪ್ಪಿಸಿಕೊಡದೇ ಇದ್ದುದರಿಂದ ಅದರ ಬಲವನ್ನು ಅನುಭವಿಸಿದನು, ಪಂದ್ಯದಲ್ಲಿ ಎಂದೂ ಸೋಲದ ಓಟಗಾರನು ನೀನೆಂದು ತಿಳಿದುಕೋ. ನಿಕಟವಾದ ಪಂದ್ಯಾಟದಲ್ಲಿ ಓಡುತ್ತಿರುವಾಗ ಪರೀಕ್ಷೆಯ ಪೂರ್ಣ ಬಲವನ್ನು ನೀವು ಅನುಭವಿಸುತ್ತಿರುವಿರಿ. ಯಾವಾ ಗಲೂ ಸೋತು ಹೋಗುತ್ತಿರುವವನು ಪುನಃ ಸೋತು ಹೋಗುವದರ ಬಗ್ಗೆ ಬಹಳವಾಗಿ ಚಿಂತಿಸುವದಿಲ್ಲ. ಹಾಗಿದ್ದರೂ ಎಂದೂ ಸೋತು ಹೋಗದೇ ಇದ್ದವನು ಕಳೆದು ಕೊಳ್ಳು ವದರ ಬಗ್ಗೆ ಯೋಚಿಸಲಾಗದಂತದ್ದು ಎಂದು ಬಯಸುವನು.

ಸುತ್ತಲಿನ ಪರಿಸ್ಥಿತಿಗಳು ಮತ್ತು ಶೋಧನೆಗಳ ಆಕಸ್ಮಿಕತೆಗಳು ಭಿನ್ನವಾಗಿರಬಹುದು. ಆದರೆ ಎಲ್ಲಾ ಯುಗಗಳಲ್ಲಿ, ಎಲ್ಲಾ ಪುರುಷರಿಗೂ ಸ್ತ್ರೀಯರಿಗೂ ಶೋಧನೆಗಳು ಒಂದೇ ಯಾಗಿರುವವು. ಮನುಷ್ಯನಿಗೆ ಶೋಧನೆಗಳು ಮೂರು ಮಾರ್ಗಗಳಲ್ಲಿ ಮಾತ್ರವೇ ಬರಬಹುದು: ಹಸಿವೆ - ಶರೀರದಾಶೆ; ಲೋಭ - ಕಣ್ಣಿನಾಶೆ; ಹಾಗೂ ಮಹತ್ವಾಕಾಂಕ್ಷೆ - ಜೀವನದ ಗರ್ವ. ಎಲ್ಲಾ ಇತರ ಶೋಧನೆಗಳು ಕೇವಲ ಈ ಮೂರು ಶೋಧನೆಗಳ ವಿವಿಧತೆಗಳಾಗಿರುತ್ತವೆ. ಅಂದರೆ ಯೇಸುವು ನಮ್ಮಂತೆಯೇ ತನ್ನ ಮಾನವತೆಯ ಪ್ರತಿಯೊಂದು ಭಾಗದಲ್ಲಿ ಶೋಧಿಸಲ್ಪಟ್ಟನು ಎಂದು ಅರ್ಥವಾಗುತ್ತದೆ.[5]

ಆತನು ಪರಿಪೂರ್ಣ ರಕ್ಷಕನಾಗಿ ಅರ್ಹತೆ ಹೊಂದುವಂತೆ ಶೋಧಿಸಲ್ಪಟ್ಟನು (ಇಬ್ರಿಯ 5:8, 9; 2:10).[6] ಆತನು ತನ್ನ ಸ್ವಂತ ನಿಮಿತ್ತವಾಗಿ, ತನ್ನ ಗುಣದ ಪರೀಕ್ಷೆ ಯಂತೆ ಶೋಧಿಸಲ್ಪಟ್ಟನು (ಇಬ್ರಿಯ 5:7-9). ಆತನು ಅನುತಾಪವುಳ್ಳ ಮಹಾ ಯಾಜಕನಾಗುವಂತೆ ನಮ್ಮ ನಿಮಿತ್ತವಾಗಿ ಆತನು ಶೋಧಿಸಲ್ಪಟ್ಟನು (ಇಬ್ರಿಯ 4:15, 16).

ಕ್ರಿಸ್ತನ *ಶೋಧನೆಗಳು ಮಹತ್ತರವಾದ ಸತ್ಯಗಳನ್ನು ಒಳಗೊಂಡಿರುತ್ತವೆ.* ಮೊದಲನೆಯದು, ಅವು ಮುಂದಾಗಿಯೇ ಪಾಪದ ಹಾಗೂ ಸೈತಾನನ ವಾಸ್ತವಿಕತೆಯನ್ನು ಮುಂಭಾವಿಸುತ್ತವೆ.[7] ಸೈತಾನನು ಕೇವಲ ಒಂದು ಶಕ್ತಿಯಾಗಿರುವದಿಲ್ಲ. ಆತನು ನಿಮ್ಮ ಆತ್ಮವನ್ನು ಹುಡುಕುವ ಆತ್ಮನಾಗಿದ್ದಾನೆ. ಮಾರ್ಕನಿಂದ ಉಪಯೋಗಿಸಲ್ಪಟ್ಟ "ಸೈತಾನ" ಎಂಬುದಕ್ಕೆ ಹಿಬ್ರೂ ಪದವು, ಮತ್ತಾಯ ಮತ್ತು ಲೂಕನಿಂದ "devil" ಎಂದು ಅನುವಾದಿಸಲ್ಪಟ್ಟಿದೆ. ಅದರ ಅರ್ಥ "ಚಾಡಿ ಹೇಳುವ ಇಲ್ಲವೇ ಸುಳ್ಳಾಗಿ

ದೂರುವವನು" ಎಂದಾಗಿರುತ್ತದೆ.

ಎರಡನೆಯದು, ಅವು ಯೇಸುವು ಪೂರ್ಣವಾಗಿ ಮಾನವನಾಗಿದ್ದನು ಎಂಬುದನ್ನು ತೋರಿಸುತ್ತವೆ. ಆತನು ಪಾಪ ಮಾಡಿದವನಾಗಿದ್ದರೆ, ಸೈತಾನನು ಆತನನನ್ನು ಯಾಕೆ ಪರೀಕ್ಷಿಸಿದನು? ಆತನ ಶೋಧನೆಗಳು ಆತನು ಪಾಪಮಾಡಬಹುದಿತ್ತೆಂದು ತೋರಿಸುತ್ತದೆ.[8]

ಮೂರನೆಯದು, ಪಾಪ ಮಾಡಲು ಶೋಧನೆಯು ಪಾಪವಲ್ಲ ಎಂಬುದನ್ನು ಅದು ಪ್ರಕಟಿಸುತ್ತದೆ. ನಾವು ಶೋಧನೆಯನ್ನು ತಪ್ಪಿಸಿಕೊಳ್ಳಲಾರೆವು. "ನನ್ನ ತಲೆಯ ಮೇಲೆ ಪಕ್ಷಿಗಳು ಹಾರಿಹೋಗುವದನ್ನು ನಾನು ಪ್ರತಿಬಂಧಿಸಲಾರೆನು ಆದರೆ, ಅವು ನನ್ನ ತಲೆಗೂದಲಿನಲ್ಲಿ ಗೂಡುಗಳನ್ನು ಕಟ್ಟುವದನ್ನು ಪ್ರತಿಬಂಧಿಸಬಲ್ಲೆನು" ಎಂದು ಮಾರ್ಟಿನ್ ಲೂಥರ್ ಹೇಳಿದ್ದಾರೆ.

## ಅದ್ಭುತ ಕಾರ್ಯದಿಂದ ಜಯಿಸುವುದು

### (ವಿರುದ್ಧವಾಗಿ)

## ಮಾನವನಂತೆ ಜಯಿಸುವುದು

ದೈಹಿಕ ಹಸಿವೆಯ ಕ್ಷೇತ್ರದಲ್ಲಿ ಯೇಸುವು ಮೊದಲು ಪರೀಕ್ಷಿಸಲ್ಪಟ್ಟನು. "ಹಸಿವೆ"ಯು ಏನನ್ನಾದರೂ ಅನುಭವಿಸುವ ಅಪೇಕ್ಷೆಯಾಗಿದೆ.[9] ಯೋಹಾನನು ಅದನ್ನು "ಶರೀರದಾಶೆ" ಎಂದು ಕರೆದನು (1 ಯೋಹಾನ 2:16).

> ಆತನು ನಲ್ವತ್ತು ದಿವಸ ಹಗಲಿರುಳು ಉಪವಾಸವಿದ್ದ ತರುವಾಯ ಆತನಿಗೆ ಹಸಿವೆಯಾಯಿತು. ಆಗ ಆ ಶೋಧಕನು ಆತನ ಬಳಿಗೆ ಬಂದು, "ನೀನು ದೇವರ ಕುಮಾರನಾಗಿದ್ದರೆ ಈ ಕಲ್ಲುಗಳು ರೊಟ್ಟಿ ಯಾಗುವಂತೆ ಅಪ್ಪಣೆಕೊಡು" ಎಂದು ಹೇಳಲು. ಆತನು, "ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು ಎಂದು ಬರೆದದೆ ಅಂದನು" (ಮತ್ತಾಯ 4:2-4).

*ಮೊದಲನೆಯ ಶೋಧನೆಯ ಹಿನ್ನೆಲೆಗಳು ಯಾವವು ಆಗಿದ್ದವು?* "ಮೊದಲನೆಯ ಯುದ್ಧರಂಗವಾಗಿ ಮಾನವ ಸಹಾನುಭೂತಿಯಿಂದ ಬೇರ್ಪಡಿಸಲ್ಪಟ್ಟ ಏಕಾಂತ ಸ್ಥಳವು ಆಯ್ಕೆ ಮಾಡಲ್ಪಟ್ಟಿತು. ಅದು ಪುರಾತನ ಯುದ್ಧ ರಂಗವಾಗಿತ್ತು. ಮೋಶೆಯನ್ನು ಒಳಗೊಂಡು ಅನೇಕ ಇಸ್ರಾಯೇಲ್ಯರು ಅರಣ್ಯದಲ್ಲಿ ಸೋಲನ್ನು ಎದುರಿಸಿದ್ದರು" ಎಂದು ಯಾರೋ ಹೇಳಿದ್ದಾರೆ.

"ಪಾಪ ಮಾಡುವದರಿಂದ ಮೊದಲನೆಯ ಆದಾಮನು ತೋಟವನ್ನು ಅರಣ್ಯವಾಗಿ ತಿರುಗಿಸಿದನು. ಆದರೆ ಎರಡನೆಯ ಆದಾಮನು ಪಾಪವನ್ನು ಎದುರಿಸುವದರಿಂತ ಅರಣ್ಯವನ್ನು ತೋಟವಾಗಿ ಮಾರ್ಪಡಿಸಿದನು" ಎಂದು ಇನ್ನೊಬ್ಬರು ಹೇಳಿದ್ದಾರೆ.

ಮೊದಲನೆಯ ಶೋಧನೆಯೊಂದಿಗೆ ಸೈತಾನನು ಯೇಸುವನ್ನು ಎದುರಿಸಿದಾಗ ಯೇಸುವು ದೈಹಿಕವಾಗಿ ಬಲಹೀನನಾಗಿದ್ದನು. ಆತನು ನಲ್ವತ್ತು ದಿನ ಹಾಗೂ ರಾತ್ರಿ ಉಪವಾಸ ಮಾಡಿದ್ದನು. ಸೈತಾನನು ಬಹಳ ಸಲ ನಮ್ಮ ಬಲಹೀನ ಕ್ಷಣಗಳಲ್ಲಿ ನಮ್ಮ ಮೇಲೆ ದಾಳಿ ಮಾಡುತ್ತಾನೆ.

*ಕಲ್ಲುಗಳನ್ನು ರೊಟ್ಟಿಯಾಗಿ ಮಾರ್ಪಡಿಸುವದರಲ್ಲಿ ಯಾವ ತೊಂದರೆಯಿದೆ?* ನೈಸರ್ಗಿಕವಾದ ಅಗತ್ಯತೆಯನ್ನು ಅನೈಸರ್ಗಿಕ ರೀತಿಯಲ್ಲಿ ಪೂರೈಸಬೇಕೆಂದು

ಸೈತಾನನು ಯೇಸುವನ್ನು ಕೇಳುತ್ತಿದ್ದನು. ಯೋಗ್ಯವಾದ ಹಸಿವನ್ನು ಅಯೋಗ್ಯವಾದ ಸಾಧನಗಳಿಂದ ತೃಪ್ತಿಪಡಿಸಿಕೊಳ್ಳಬೇಕೆಂದು ಅವನು ಯೇಸುವನ್ನು ಕೇಳಿದನು. ಯೇಸುವಿಗೆ ಆಹಾರದ ಅವಶ್ಯಕತೆಯಿತ್ತು. ಬೇಗನೇ ಆಹಾರ ಪಡೆದು ಕೊಳ್ಳುವ ಮಾರ್ಗವನ್ನು ಸೈತಾನನು ಸೂಚಿಸಿದನು.

"ಆ ಸೂಚನೆಯಲ್ಲಿ ಯಾವ ತೊಂದರೇಯಿದೆ?" ಎಂದು ನಾವು ಹೇಳ ಬಹುದು. ಆ ರೀತಿಯಲ್ಲಿ ಯೇಸುವು ತನ್ನ ಹಸಿವೆಯನ್ನು ತೀರಿಸಿಕೊಂಡರೆ, ಸ್ವಾಭಾವಿಕ ವಾದ ಅಗತ್ಯತೆಯನ್ನು ಅದ್ಭುತಕರವಾದ ರೀತಿಯಲ್ಲಿ ತೃಪ್ತಿಪಡಿಸಿಕೊಳ್ಳುವದರ ಅಪರಾಧದಲ್ಲಿರುತ್ತಿದ್ದನು. ಅದ್ಭುತಕರವಾದ ಶಕ್ತಿಗೆ ಇದು ಉದ್ದೇಶವಾಗಿರುವದಿಲ್ಲ (ಯೋಹಾನ 20:31). "ಶರೀರದಲ್ಲಿ ನಾಟಿದ ಶೂಲವನ್ನು" ತೆಗೆದು ಹಾಕಲು ಪೌಲನು ಅದ್ಭುತಕರವಾದ ಶಕ್ತಿಯನ್ನು ಉಪಯೋಗಿಸಲಿಲ್ಲ (2 ಕೊರಿಂಥ 12:7), ಎಪಫ್ರೊದಿತನು ಅದ್ಭುತ ಕಾರ್ಯದಿಂದ ತನ್ನನ್ನು ಗುಣಪಡಿಸಿಕೊಳ್ಳಲಿಲ್ಲ (ಫಿಲಿಪ್ಪಿ 2:25-27) ತ್ರೊಫೀಯನು ತನ್ನ ಸ್ವಾಭಾವಿಕವಾದದ್ದನ್ನು ಜಯಿಸಲು ಅದ್ಭುತ ಕಾರ್ಯವನ್ನು ಉಪಯೋಗಿಸಲಿಲ್ಲ (2 ತಿಮೊಥೆ 4:20). ಮಾನವ ಶೋಧನೆಗಳನ್ನು ಜಯಿಸಲು ಮತ್ತು ಮಾನವನಾಗಿ ಮುಂದುವರಿಯಲು ಯೇಸುವು ತನ್ನ ದೈವಿಕ ಸ್ವಭಾವದ ಮೇಲೆ ಅವಲಂಭಿಸಲಿಲ್ಲ. ಯೇಸುವು ತನ್ನನ್ನು ತಗ್ಗಿಸಿಕೊಂಡು ನಿಜವಾದ ಹಾಗೂ ಪೂರ್ಣವಾದ ಮಾನವನಾದನು (ಫಿಲಿಪ್ಪಿ 2:5-7). ಎಲ್ಲಾ ಜನರು ಮಾಡುವಂತೆ ಅದೇ ಮಟ್ಟದಲ್ಲಿ ಆತನು ಶೋಧನೆಯನ್ನು ಎದುರಿಸಿದನು. ಶಿಲುಬೆಯ ಮೇಲೆ ಪಾಪಕ್ಕಾಗಿ ಮಾತ್ರವೇ ಶ್ರಮೆತಾಳಬಲ್ಲಾತನಾಗಿದ್ದನು. ಆತನು ನೋವನ್ನು ಅದ್ಭುತಕಾರ್ಯದಿಂದ ತೆಗೆದು ಹಾಕಿ ಇನ್ನೂ ಮಾನವನಾಗಿರಲು ಸಾಧ್ಯವಿರಲಿಲ್ಲ, ತನ್ನ ಹಸಿವೆಯ ಬಾಧೆ ಗಳನ್ನು ಜಯಿಸಲು ಆತನು ಅದ್ಭುತ ಮಾಡಿದ್ದರೆ ಅದ್ಭುತ ಕಾರ್ಯಗಳ ಸಹಾಯವಿಲ್ಲದೆ ತಮ್ಮ ಮಾನವ ಸಮಸ್ಯೆಗಳನ್ನು ಎದುರಿಸುವದಕ್ಕೆ ಆತನ ಎಲ್ಲಾ ಅನುಯಾಯಿಗಳಿಗೆ ಆತನು ನಿರಾಶೆಯಾಗುತ್ತಿದ್ದನು.

ಯೋಗ್ಯವಾದ ಕೊರತೆಗಳನ್ನು ಅಯೋಗ್ಯವಾದ ವಿಧಾನಗಳಿಂದ ತೃಪ್ತಿಪಡಿಸಿ ಕೊಳ್ಳಲು ಪ್ರಯತ್ನಿಸುವದರಿಂದ ನೋವು, ನಿರಾಶೆಗಳನ್ನು ಹುಟ್ಟಿಸಿದ ಜನಸಮೂಹಗಳ ಬಗ್ಗೆ ಯೋಚಿಸುವುದು ಕಠಿಣವಾಗಿರುವುದಿಲ್ಲವೇ.

ಈ ಶೋಧನೆಯ ಗುರಿಯು ಮಾನವ ದೇಹವಾಗಿತ್ತು. ಎವರೆಟ್ಟ್ ಎಫ್. ಹ್ಯಾರಿಸನ್ ಹೀಗೆ ಹೇಳಿದ್ದಾರೆ,

> ಬರುವ ದಿನಗಳಲ್ಲಿ ಯೇಸುವು ತನ್ನ ಅನುಯಾಯಿಗಳ ಮೇಲೆ ಶಿಷ್ಯತ್ವದ ವಿಷಯಗಳ ಬಗ್ಗೆ ಖಂಡಿತವಾದ ಬೇಡಿಕೆಗಳನ್ನು ಇಡಲಿಕ್ಕಿದ್ದನು. ಈ ಬೇಡಿಕೆ ಗಳಲ್ಲಿ ಮೂಲವಾದದ್ದು ತಮ್ಮನ್ನು ಅಲ್ಲಗಳೆಯುವಂಥದ್ದಾಗಿತ್ತು. ಅಂಥ ಅಗತ್ಯ ಕಾರ್ಯ ಕೇಳುವಂಥದ್ದು ಮತ್ತು ಅದರ ಹೇಳಿಕೆಯ ಬಲವು ಶೋಧನೆಯ ಅನುಭವದಿಂದ ಬಂದಿತು. ಯೇಸುವು ತನ್ನ ಹಿಂದೆ ಬರುವವರಲ್ಲಿ ಪುನಃ ಉತ್ಪಾದನೆಯಾಗುವ ಮಾದರಿಯನ್ನು ಯೇಸುವು ಸ್ಥಾಪಿಸಿದನು. ಯೇಸುವು ತನ್ನ ಆಜ್ಞೆಯ ಸಾಧನದಿಂದ ತನಗಾಗಿ ರೊಟ್ಟಿಯನ್ನು ಒದಗಿಸಿಕೊಳ್ಳುವದರಿಂದ ಈ ಶೋಧನೆಗೆ ಒಪ್ಪಿಸಿಕೊಂಡಿದ್ದರೆ, ತಮ್ಮ ಹಣೆಬೆವರು ಸುರಿಸಿ ತಮ್ಮ ಅನುದಿನದ ಆಹಾರವನ್ನು ಸಂಪಾದಿಸುವವರಿಗಾಗಿ ಶಿಷ್ಯತ್ವದ ಪ್ರಶ್ನೆಯೇ ಉಳಿಯುತ್ತಿರಲಿಲ್ಲ. ತನ್ನ ಅನುಯಾಯಿಗಳಿಗೆ ಅರ್ಥವುಳ್ಳ ಸ್ವಾರ್ಥವಿಲ್ಲದ ಯೋಗ್ಯ ಪ್ರದರ್ಶನವನ್ನು ಕೊಡುವದಲ್ಲಿದ್ದರೆ ಯೇಸುವು "ನನ್ನಿಂದ ಕಲಿತುಕೊಳ್ಳಿರಿ" ಎಂದು ಹೇಳುತ್ತಿರಲಿಲ್ಲ.[10]

*ಯೇಸುವು ಈ ಶೋಧನೆಯನ್ನು ಹೇಗೆ ಜಯಿಸಿದನು?* ಯೇಸುವು "ದೇವರ ವಾಕ್ಯದ ಆತ್ಮನ ಖಡ್ಗದಿಂದ" (ಎಫೆಸ 6:17) ಸೈತಾನನೊಂದಿಗೆ ಹೋರಾಡಿದನು. ನಮ್ಮ ಕರ್ತನು ಸೈತಾನನಿಗೆ ಧರ್ಮೋಪದೇಶಕಾಂಡ 8:3ನ್ನು ಉಲ್ಲೇಖಿಸಿದನು. ಈ ವಚನವು "ರೊಟ್ಟಿ" ಮಾತ್ರವೇ ಅವಶ್ಯಕವಾದ ಸಂಗತಿಯಾಗಿರುವದಿಲ್ಲ ಎಂಬುದನ್ನು ತೋರಿಸುತ್ತಾನೆ. ರೊಟ್ಟಿಯು ಕೇವಲ ಅಗತ್ಯವಾಗಿದ್ದರೆ ಕಲ್ಲುಗಳನ್ನು ರೊಟ್ಟಿಯಾಗಿ ಮಾರ್ಪಡಿಸುವದರಲ್ಲಿ ಯೇಸುವಿಗೆ ಪರಿಪೂರ್ಣವಾಗಿ ನ್ಯಾಯ ಬದ್ಧವಾದದ್ದಾಗಿರುತ್ತಿತ್ತು. "ರೊಟ್ಟಿಯು" ಯೇಸುವಿನ ಕೇವಲ ಆಲೋಚನೆಯಾಗಿರಲಿಲ್ಲ. ಆತನು ಇಲ್ಲಿ ದೇವರ ಚಿತ್ತವನ್ನು ಮಾಡಲಿಕ್ಕಾಗಿ ಇದ್ದನು. ಆತನ ಚಿತ್ತವನ್ನು ಮಾಡುವುದು ಮಾನವನಂತೆ ಜೀವಿಸುವದೂ ಮತ್ತು ಮಾನವನಂತೆ ಸೈತಾನನ್ನು ಎದುರಿಸುವುದೂ ಆಗಿತ್ತು.

## ದೇವರನ್ನು ನಂಬುವದರಿಂದ ಜಯಿಸುವುದು
### (ವಿರುದ್ಧವಾಗಿ)
## ದೇವರನ್ನು ಶೋಧಿಸುವದರಿಂದ ಜಯಿಸುವುದು

ಯೇಸುವು ಶೋಧಿಸಲ್ಪಟ್ಟ ಎರಡನೆಯ ಕ್ಷೇತ್ರವು ಮಹತ್ವಾಕಾಂಕ್ಷೆ ಸಾಧಿಸುವ ಅಪೇಕ್ಷೆಯಾಗಿತ್ತು.[11] ಯೋಹಾನನು ಇದನ್ನು "ಜೀವನದ ಗರ್ವ" (1 ಯೋಹಾನ 2:16) ಎಂದು ಕರೆದಿದ್ದಾನೆ.

> ಆಗ ಸೈತಾನನು ಆತನನ್ನು ಪರಿಶುದ್ಧ ಪಟ್ಟಣಕ್ಕೆ ಕರಕೊಂಡು ಹೋಗಿ ದೇವಾಲಯದ ಶಿಖರದ ಮೇಲೆ ನಿಲ್ಲಿಸಿ ಆತನಿಗೆ, "ನೀನು ದೇವರ ಕುಮಾರನಾಗಿದ್ದರೆ ಕೆಳಕ್ಕೆ ದುಮುಕು; 'ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು'; 'ನಿನ್ನ ಕಾಲು ಕಲ್ಲಿಗೆ ತಗಲೀತೆಂದು ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು' ಎಂಬುದಾಗಿ ಬರೆದದೆಯಲ್ಲಾ" ಎಂದು ಹೇಳಿದನು. ಅದಕ್ಕೆ ಯೇಸು, " 'ನಿನ್ನ ದೇವರಾಗಿರುವ ಕರ್ತನನ್ನು' ಪರೀಕ್ಷಿಸಬಾರದು ಎಂಬದಾಗಿ ಸಹ ಬರೆದದೆ ಅಂದನು" (ಮತ್ತಾಯ 4:5-7).

*ಎರಡನೆಯ ಶೋಧನೆಯ ಹಿನ್ನೆಲೆಗಳು ಯಾವವಿದ್ದವು?*[12] ಹಿನ್ನೆಲೆಯ ಸ್ಥಳವು ಯೆರೂಸಲೇಮ ಪಟ್ಟಣದಲ್ಲಿ ದೇವಾಲಯದ ಶಿಖರವಾಗಿತ್ತು. "ಶಿಖರವು" ಎಂಬುದರ ಅರ್ಥ "ಭಾಗ" ಎಂದಾಗಿರಬಹುದು. ಬಹುಶಃ ಇದು ಇನ್ನೂರು ಅಡಿ ಕೆಳಗೆ ಕಿದ್ರೋನ ಕೊಳವನ್ನು ಮೇಲಿಂದ ಕೆಳಗೆ ನೋಡುತ್ತಿದ್ದ ದಕ್ಷಣ ಭಾಗವಾಗಿರಬಹುದು. ಈ ಕೊಳದೊಳಗೆ ಜಿಗಿಯಬೇಕೆಂದು ದೇವಾಲಯದಿಂದ ತನ್ನನ್ನು ಕೆಳಗೆ ಎಸೆದುಕೊಳ್ಳಬೇಕೆಂದು ಮತ್ತು ಆತನ ತಂದೆಯ ವಾಗ್ದಾನಗಳನ್ನು ಕೇಳಬೇಕೆಂದು ಸೈತಾನನು ಯೇಸುವನ್ನು ಕೇಳಿಕೊಳ್ಳುತ್ತಿದ್ದಾನೆ. ಆತನನ್ನು ರಕ್ಷಿಸುವದಕ್ಕಾಗಿ ಪಾರಲೌಕಿಕ ಸಹಾಯವನ್ನು ದೇವರು ಒದಗಿಸುವನೆಂದು ಸೈತಾನನು ಶೋಧಿಸಿ ಕೀರ್ತನೆ 91:11ನ್ನು ತನ್ನ ಬೇಡಿಕೆಗೆ ಹಿನ್ನೆಲೆಯಾಗಿ ಉಲ್ಲೇಖಿಸಿದ್ದಾನೆ.

ಈ ಶೋಧನೆಯು ಯೇಸುವಿಗಾಗಿ ಎರಡು ಅಕರ್ಷಣೆಗಳನ್ನು ಒಳಗೊಂಡಿತ್ತು: ತನ್ನ ತಂದೆಯ ವಾಗ್ದಾನವನ್ನು ಸಿದ್ಧಪಡಿಸಿ ತೋರಿಸುವುದು ಹಾಗೂ ಜನರ ಮಧ್ಯದಲ್ಲಿ ಕೂಡಲೇ ಪ್ರಸಿದ್ಧಿಯನ್ನು ಪಡೆದು ಕೊಳ್ಳುವ ಅಪೇಕ್ಷೆ. ರಾಷ್ಟ್ರದ ಮೇಲೆ ಆಕರ್ಷಣೆ ಸೃಷ್ಟಿಸಿ ಜಯಿಸಲು ಮತ್ತು ಒಂದೇ ಹೊಡೆತಕ್ಕೆ ಅದರ ಹಿಂಬಾಲಿಸುವಿಕೆಯನ್ನು

ಗೆದ್ದುಕೊಳ್ಳಲು ಯೇಸುವು ಆಹ್ವಾನಿಸಲ್ಪಟ್ಟನು. ಇದು ಮಾನಸಿಕವಾದ ಮತ್ತು ಆತ್ಮಿಕ ಶೋಧನೆಯಾಗಿತ್ತು.

*ದೇವಾಲಯದ ಶಿಖರದಿಂದ ಕೆಳಗೆ ಧುಮುಕುವದರಲ್ಲಿ ಯಾವ ತೊಂದರೆಯಿದೆ?* ಜಿ. ಡಬ್ಲ್ಯೂ. ಮಕ್‌ಗರ್ವಿ ಹೀಗೆ ಹೇಳಿದ್ದಾರೆ,

> ಯೇಸುವು ತಾನೆ ಕೆಳಕ್ಕೆ ಧುಮುಕದೇ ಇದ್ದರೆ - ತನ್ನ ಕುಮಾರತ್ವವನ್ನು ಸಿದ್ಧಪಡಿಸಿ ತೋರಿಸಲು ತಂದೆಗೆ ಅನಾವಶ್ಯಕವಾದ ಅದ್ಭುತ ಕಾರ್ಯವನ್ನು ಬೇಡುಕೊಳ್ಳ ಬೇಕಾಗಿತ್ತು, ಹಾಗೂ ಅದರಿಂದ ದೇವರ ಪ್ರೀತಿಯನ್ನು ಅನಾವಶ್ಯಕವಾದ ಪರೀಕ್ಷೆಗೆ ಒಲಪಡಿಸಬೇಕಾಗುತಿತ್ತು. ದೇವರ ಯಾವುದೇ ಆಜ್ಞೆ ಇಲ್ಲವೇ ಕರ್ತವ್ಯದ ಕರೆಯಿಲ್ಲದೆ ತಮ್ಮನ್ನು ಗಂಡಾಂತರಕ್ಕೆ ಗುರಿಪಡಿಸಿಕೊಳ್ಳುವರು, ಆತನ ಪ್ರೀತಿ ಯನ್ನು ಪರೀಕ್ಷೆ ಮಾಡುವರು.[13]

ಸೈತಾನನು ಪರಿಶುದ್ಧ ಬರಹವನ್ನು ಉಲ್ಲೇಖಿಸಿದನು, ಆದರೆ ಅವನು ಅದರ ಯೋಗ್ಯ - ಉಪಯೋಗ ಮಾಡಿಕೊಳ್ಳಲಿಲ್ಲ. ಅವನು ದೇವರ ವಾಕ್ಯವನ್ನು ದೇವರು ಹೇಳದೇ ಇರುವಂಥದ್ದನ್ನಾಗಿ ಮಾಡುತ್ತಿದ್ದನು. ಸೈತಾನನ ತಲೆಯು ಪರಿಶುದ್ಧ ಬರಹಗಳೊಂದಿಗೆ ತುಂಬಿಕೊಂಡಿತ್ತು. ಆದರೆ ಅವನ ಹೃದಯವು ಪಾಪದಿಂದ ತುಂಬಿಕೊಂಡಿತ್ತು. ಸೈತಾನನು ಬೈಬಲನ್ನು ದ್ವೇಷಿಸುತ್ತಾನೆ. ಆದರೆ ಅದನ್ನು ತನ್ನ ಉದ್ದೇಶಗಳನ್ನು ಸಾಧಿಸಲು ಉಪಯೋಗಿಸ ಬಲ್ಲನು. ಪರಿಶುದ್ಧ ಬರಹವನ್ನು ಉಲ್ಲೇಖಿಸುವುದು ಸುಲಭ. ಪರಿಶುದ್ಧ ಬರಹವು ಏನು ಹೇಳುತ್ತದೆ ಎಂಬುದನ್ನು ಕಂಡುಕೊಳ್ಳುವುದು ಮತ್ತು ಅವುಗಳ ಬೋಧ ನೆಗಳನ್ನು ಅನುಸರಿಸುವುದು ಕಷ್ಟಕರವಾದದ್ದಾಗಿದೆ.

*ಯೇಸುವು ಈ ಶೋಧನೆಯನ್ನು ಹೇಗೆ ಜಯಿಸಿದನು?* ಯೇಸುವು ಇನ್ನೊಂದು ಪರಿಶುದ್ಧ ಬರಹವನ್ನು ಅಂದರೆ ಧರ್ಮೋಪದೇಶಕಾಂಡ 6:16ನ್ನು ತೋರಿಸಿದನು. ಪರಿಶುದ್ಧ ಬರಹದಿಂದ ಪರಿಶುದ್ಧ ಬರಹವನ್ನು ಯೇಸುವು ವಿವರಿಸಿದನು. ಪರಿಶುದ್ಧ ಬರಹಗಳ ಸಂಪೂರ್ಣ ತಿಳುವಳಿಕೆಯನ್ನು ಹೊಂದಿಕೊಳ್ಳಲು ಬೈಬಲ್ ಹೇಳುವಂಥ ಎಲ್ಲವನ್ನು ತೆಗೆದು ಕೊಳ್ಳತಕ್ಕದ್ದು. ಯೇಸುವು ಹಳೇ ಒಡಂಬಡಿಕೆಯನ್ನು ತೆಗೆದು ಕೊಂಡನು: ಕೀರ್ತನೆಗಳಲ್ಲಿಯ ಒಂದು ವಾಕ್ಯಭಾಗವು ಧರ್ಮೋಪದೇಶಕಾಂಡದಲ್ಲಿ ಒಂದು ವಾಕ್ಯಭಾಗದಿಂದ ಅರ್ಹತೆ ಹೊಂದಿತು. ಒಂದು ಏಕಾಂಶವಾಗಿ ನಮ್ಮ ಕರ್ತನು ಹಳೇ ಒಡೆಬಡಿಕೆಯನ್ನು ಸ್ಪಷ್ಟವಾಗಿ ಉಪಯೋಗಿಸಿದ್ದಕ್ಕಿಂತ ಹೆಚ್ಚಿನ ಶಿಫಾರಸುಗಳನ್ನು ಕಂಡುಕೊಳ್ಳುವುದು ಅಸಾಧ್ಯವಾದದ್ದಾಗಿದೆ. ಯೇಸುವು ಉಲ್ಲೇಖಿಸಿದ ವಾಕ್ಯಭಾಗವು ಇಸ್ರಾಯೇಲ್ಯರು ದೇವರನ್ನು ಶೋಧಿಸಿದ್ದರ ಬಗ್ಗೆ ಇರುತ್ತದೆ. ದೇವರ ಸಾನಿಧ್ಯದ ಹಾಗೂ ಒದಗಿಸಿದ್ದರ ಬಗ್ಗೆ ಇರುತ್ತದೆ. ದೇವರ ಸಾನಿಧ್ಯದ ಹಾಗೂ ಒದಗಿಸುವಿಕೆಯನ್ನು ಕುರಿತು ಸಂಶಯ ವ್ಯಕ್ತ ಪಡಿಸುವದರಿಂದ ಆ ಜನರು ಕರ್ತನನ್ನು ಪರೀಕ್ಷೆಗೊಳಪಡಿಸಿದರು. ಅರಣ್ಯ ಪ್ರಯಾಣದಲ್ಲಿ ಇಸ್ರಾಯೇಲ್ಯರು ದೇವರನ್ನು ಹತ್ತು ಸಲ ಶೋಧಿಸಿದರೆಂದು ಹೇಳಲ್ಪಟ್ಟಿದ್ದರೂ ಒಂದು ಘಟನೆಯು ವಿವರವಾಗಿ ವರದಿ ಮಾಡಲ್ಪಟ್ಟಿದೆ. ಅದು ಇಲ್ಲಿ ಮೋಶೆಯಿಂದ ಹೇಳಲ್ಪಟ್ಟಿದೆ ಹಾಗೂ ಯೇಸುವಿನಿಂದ ಉಲ್ಲೇಖಿಸಲ್ಪಟ್ಟಿದೆ.

ಯೇಸುವು ತನ್ನ ತಂದೆಯನ್ನು ಶೋಧಿಸುವದನ್ನು ನಿರಾಕರಿಸಿದನು. ಸೈತಾನನಿಂದ ಉಲ್ಲೇಖಿಸಲ್ಪಟ್ಟ ವಾಕ್ಯಭಾಗವು ದೇವರು ತನ್ನ ಕುಮಾರನು ಎಷ್ಟೇ ವಿಚಾರಹೀನನೂ ಜಾಗರೂಕತೆಯಿಲ್ಲದವನೂ ಆಗಿದ್ದರೂ ರಕ್ಷಿಸುವನೆಂದು ಬೋಧಿಸುವದಿಲ್ಲ. ಆದರೆ ಸೈತಾನನಿಂದ ಉಲ್ಲೇಖಿಸಲ್ಪಟ್ಟ ಪರಿಶುದ್ಧ ಬರಹದ ಅರ್ಹತೆಯನ್ನು ತೋರಿಸುವದರಿಂದ ಅದರ ಯೋಗ್ಯ ಅನ್ವಯ ಮಾಡಿದನು.

## ರಾಜಿ ಸಂಧಾನದಿಂದ ಜಯಿಸುವುದು
## (ವಿರುದ್ಧವಾಗಿ)
## ಶಿಲುಬೆಯಿಂದ ಜಯಿಸುವುದು

ಯೇಸುವಿನ ಶೋಧನೆಯ ಮೂರನೆಯ ಕ್ಷೇತ್ರವು ಲೋಭ, ಸ್ವಾಸ್ಥ್ಯವನ್ನು ಪಡೆಯಲು ಅಪೇಕ್ಷೆಯಾಗಿತ್ತು.[14] ಇದನ್ನು ಯೋಹಾನನು "ಕಣ್ಣಿನಾಶೆ" (1 ಯೋಹಾನ 2:16) ಎಂದು ಕರೆದನು.

> ಬಳಿಕ ಸೈತಾನನು ಆತನನ್ನು ಬಹಳ ಎತ್ತರವಾದ ಬೆಟ್ಟಕ್ಕೆ ಕರಕೊಂಡು ಹೋಗಿ ಪ್ರಪಂಚದ ಎಲ್ಲಾ ರಾಜ್ಯಗಳನ್ನೂ ಅವುಗಳ ವೈಭವವನ್ನೂ ಆತನಿಗೆ ತೋರಿಸಿ, "ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ ಇವುಗಳನ್ನೆಲ್ಲಾ ನಿನಗೆ ಕೊಡು ವೆನು" ಅಂದನು. ಯೇಸು ಅವನಿಗೆ, "ಸೈತಾನನೇ, ನೀನು ತೊಲಗಿ ಹೋಗು. 'ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡ ಬಿದ್ದು ಆತನೊಬ್ಬನನ್ನೆ ಆರಾಧಿಸಬೇಕು' ಎಂಬದಾಗಿ ಬರೆದದೆ ಅಂದನು" (ಮತ್ತಾಯ 4:8-10).

*ಈ ಶೋಧನೆಯ ಹಿನ್ನೆಲೆಗಳು ಯಾವವಾಗಿದ್ದವು? ಯೇಸುವು* ಎತ್ತರವಾದ ಬೆಟ್ಟದ ಮೇಲೆ ತೆಗೆದುಕೊಂಡು ಹೋಗಲ್ಪಟ್ಟನು. ಈ ಎತ್ತರವಾದ ಪ್ರದೇಶದಿಂದ (ಲೂಕ ಪ್ರಕಾರವಾಗಿ "ಕ್ಷಣಮಾತ್ರದಲ್ಲಿ") ಲೋಕದ ಎಲ್ಲಾ ರಾಜ್ಯಗಳು ಆತನಿಗೆ ತೋರಿ ಸಲ್ಪಟ್ಟವು. ಯೇಸು ಬಿದ್ದು ತನ್ನನ್ನು ಆರಾಧಿಸಿದರೆ ತಾನು ಈ ಎಲ್ಲಾ ರಾಜ್ಯಗಳನ್ನು ಆತನಿಗೆ ಕೊಡುವೆನೆಂದು ಯೇಸುವಿಗೆ ಸೈತಾನನು ಹೇಳಿದನು. ಸೈತಾನನು ಲೋಕದ ಎಲ್ಲಾ ರಾಜ್ಯಗಳ ಒಡೆಯನಾಗಿರಲಿಲ್ಲ. ಆದರೆ ಅವು ಅವನ ನಿಯಂತ್ರಣದಲ್ಲಿ ಇದ್ದವು. ಯೇಸುವು ಲೋಕದ ರಾಜ್ಯಗಳನ್ನು ನೋಡಿದನು ಎಂದು ಹೇಳಲ್ಪಟ್ಟಿರುವದಿಲ್ಲ; ಆತನಿಗೆ ರಾಜ್ಯಗಳು ತೋರಿಸಲ್ಪಟ್ಟವು ಎಂದು ಹೇಳಲ್ಪಟ್ಟಿದೆ. ಸೈತಾನನು ರಾಜ್ಯಗಳ ದಿಕ್ಕುಗಳ ಕಡೆಗೆ ತೋರಿಸಿರಬಹುದು; ಅವುಗಳನ್ನು ವಿವರಿಸಿರಬಹುದು. ಅದೊಂದು ದರ್ಶನವೂ ಆಗಿರಬಹುದು. ಏದೆನ್ ತೋಟದಲ್ಲಿ ಹವ್ವಳ ಶೋಧನೆಗೆ ಈ ಶೋಧನೆಯು ಸಮಾನ ವಾಗಿತ್ತು. ಮರದ ಹಣ್ಣಿನ ಅಪೇಕ್ಷೆಯನ್ನು ಹವ್ವಳು ನೋಡಿದಂತೆ ಯೇಸುವು ಲೋಕದ ರಾಜ್ಯಗಳನ್ನು ನೋಡಿದನು.

*ಅಲ್ಲಿ ಯಾವ ತೊಂದರೆಯಿತ್ತು?* ಒಳ್ಳೆಯದು ಬರಲಿಕ್ಕಾಗುವಂತೆ ಕೆಟ್ಟದ್ದನ್ನು ಮಾಡಲು ಸೈತಾನನು ಯೇಸುವನ್ನು ಕೇಳಿದನು. "ನೀನು ಲೋಕವನ್ನು ಜಯಿಸಲು ಬಂದಿರುವಿ. ನೀನು ನನ್ನನ್ನು ಆರಾಧಿಸಿದರೆ ಮಾತ್ರ ನಾನು ನಿನಗೆ ಸಹಾಯ ಮಾಡು ವೆನು. ಹೋರಾಡಲು ನಿನಗೆ ನಾನಿದ್ದರೆ ಎಷ್ಟು ಬೇಗನೇ ಲೋಕವನ್ನು ಜಯಿಸಬಹುದು ಎಂಬುದನ್ನು ಬೇಗನೇ ಯೋಚಿಸು" ಎಂದು ಸೈತಾನನು ಹೇಳುತ್ತಿರಬಹುದು. ಸಂಧಾನದಿಂದ ಯೇಸುವು ತನ್ನ ಆತ್ಮಿಕ ಗುರಿಗಳನ್ನು ಸಾಧಿಸಲು ಆಹ್ವಾನಿಸಲ್ಪಟ್ಟನು. ಜೆ. ಓಸ್ವಾಲ್ಡ್ ಸ್ಯಾಂಡರ್ಸ್ ಹೀಗೆ ಹೇಳಿದ್ದಾರೆ,

> ಯೇಸು ಬಲದ ಮತ್ತು ಮಹಿಮೆಯ ಎಲ್ಲಾ ಲೋಕವನ್ನು ಹೊಂದಿಕೊಳ್ಳಲು ಬಂದನೆಂಬುದು ನಿಜವಾಗಿದೆ. ಆದರೆ ಆತನು ಅದನ್ನು ತನ್ನ ತಂದೆಯ ಮಾರ್ಗದಲ್ಲಿ, ತನ್ನ ತಂದೆಯ ಸಮಯದಲ್ಲಿ ಆತನು ಅದನ್ನು ಹೊಂದಿಕೊಳ್ಳ ಬೇಕಾಗಿತ್ತು. ಆತನ ತಂದೆಯ ಮಾರ್ಗವು ಶಿಲುಬೆಯ ಮೇಲಿನ ಮರಣವನ್ನು ಒಳಗೊಂಡಿತ್ತು ... ಸೈತಾನನು ತನ್ನ ಕೊನೆಯ ಪ್ರಯತ್ನವನ್ನು ತನ್ನೊಂದಿಗೆ

ಒಪ್ಪಂದದಿಂದ ಶಿಲುಬೆಯನ್ನು ತಪ್ಪಿಸುವ ಸಾಧ್ಯತೆಯ ಮೇಲೆ ಕೇಂದ್ರೀಕರಿಸಿದನು."[15]

*ಯೇಸುವು ಈ ಶೋಧನೆಯನ್ನು ಹೇಗೆ ಜಯಿಸಿದನು?* ದೇವರು ನಮ್ಮ ಆರಾಧನೆಯ ಕೇಂದ್ರವಾಗಿದ್ದಾನೆಂದು ಯೇಸುವು ಸೈತಾನನ ಜ್ಞಾಪಕಕ್ಕೆ ತಂದನು (ಮತ್ತಾಯ 4:10). ಆತನು ಪುನಃ ಧರ್ಮೋಪದೇಶಕಾಂಡ 6:13ನ್ನು ಉಲ್ಲೇಖಿಸಿ ಹಳೇ ಒಡಂಬಡಿಕೆಯನ್ನು ತಿಳಿಸಿದನು. ಲೋಕವನ್ನು ಜಯಿಸುವ ಸೈತಾನನ ಮಾರ್ಗವು ದೇವರ ಮಾರ್ಗಕ್ಕಿಂತ ಬಹಳ ಭಿನ್ನವಾಗಿತ್ತು. ಯೇಸುವು ಸೈತಾನನ ಬಲಗಳೊಂದಿಗೆ ಸೇರುವ ಮೊದಲು, ಆತನು ತನ್ನ ರಾಜ್ಯವು ಕಟ್ಟಲ್ಪಡಬೇಕಾಗಿತ್ತು. ಯೇಸುವು ಆತ್ಮಿಕ ರಾಜ್ಯವನ್ನು ಸ್ಥಾಪಿಸಲು ಬಂದನೇ ಹೊರತು ಲೌಕಿಕ ರಾಜ್ಯವನ್ನಲ್ಲ. ಸೈತಾನನು ಸೂಚಿಸಿದ ವಿಧಾನ ಮೂಲಕವಾಗಿ ಆತನು ಲೋಕದ ರಾಜ್ಯಗಳ ನಿಯಂತ್ರಣವನ್ನು ಕೂಡಲೇ ಪಡೆದುಕೊಳ್ಳ ಬಹುದಿತ್ತು. ಆದರೆ ಅಂಥ ನಿಯಮವು ಸತ್ಯವನ್ನು, ನೀತಿಯನ್ನು ಬಲಿತೆಗೆದು ಕೊಳ್ಳುತ್ತಿತ್ತು. ಶಿಲುಬೆಯ ಮಾರ್ಗದ ಮುಖಾಂತರ ಹೋಗುವದರಿಂದ ಹಾಗೂ ತನ್ನ ತಂದೆಯ ಚಿತ್ತಕ್ಕೆ ನಿಷ್ಠೆಯಿಂದಿರುವುದರ ಮೂಲಕ ಲೋಕವನ್ನು ಜಯಿಸುವುದನ್ನು ಆತನು ಆಯ್ದು ಕೊಂಡನು.

ಶೋಧನೆಯ ಮೇಲೆ ಯೇಸುವಿನ ಜಯದಲ್ಲಿ ಯೇಸುವಿನ ಮಾನವತೆಯನ್ನು ಸ್ಪಷ್ಟವಾಗಿ, ಯಾವ ತಪ್ಪಿಲ್ಲದೆ ನಾವು ಕಂಡುಕೊಳ್ಳುತ್ತೇವೆ. ಆತನು ನಿಜವಾಗಿಯೂ ಮಾನವನಾದನು.

---

ಟಿಪ್ಪಣಿಗಳು

[1]ಸಂಪ್ರದಾಯವು ಶೋಧನೆಯ ಘಟನಾ ಸ್ಥಳವನ್ನು ಕ್ವಾರಂಟಾನಿಯಾದಲ್ಲಿ ಇಡುತ್ತದೆ. ಅದು ಯೊರ್ದನ್ ಕೊಳ್ಳದ ಮೇಲೆ ಹದಿನೈದು ನೂರು ಅಡಿ ಎತ್ತರದಲ್ಲಿತ್ತು ಹಾಗೂ ಯೂದಾಯ ತಪ್ಪಲಿನ ಹೊರಗೆ ಮೇಲೇರಿದ ಪರ್ವತದ ಮೇಲೆ ಇತ್ತು. "ಯೊರ್ದನಿನಿಂದ ಹಿಂದಿರುಗಿದನು" ಎಂಬ ಲೂಕನ ಹೇಳಿಕೆಗೆ ಒಪ್ಪಿಕೊಳ್ಳುತ್ತದೆ. ಯೊರ್ದನ್ ಮತ್ತು ಯೆರಿಕೋ ಪಶ್ಚಿಮಕ್ಕೆ ಬಾಪ್ತಿಸ್ಮದ ಸಾಂಪ್ರದಾಯಕ ಸ್ಥಳದಿಂದ ಆರು ಇಲ್ಲವೇ ಎಂಟು ಮೈಲು ದೂರದಲ್ಲಿತ್ತು. ಯೆರಿಕೋವಿನಿಂದ ಯೆರೂಸಲೇಮಿಗೆ ನಡಿಸುವ ಕಡಿದಾದ ಮಾರ್ಗವು Ascent of Blood ಎಂದು ಕರೆಯಲ್ಪಟ್ಟಿದೆ, ಯಾಕಂದರೆ ಅದು ದಾಳಿಗಳ್ಳರಿಂದ ತುಂಬಿಕೊಂಡಿತ್ತು. ಈ ಮಾರ್ಗದೊಂದಿಗೆ ಯೇಸುವು ಪರ್ವತವನ್ನು ತಲುಪುವನು. ಉನ್ನತವು ವಿಶಾಲವಾದ ಅವಕಾಶವನ್ನು ತೋರಿಸಿತು. ಪಶ್ಚಿಮದಲ್ಲಿ ಯೆರೂಸಲೇಮಿಗೆ, ಪೂರ್ವದಲ್ಲಿ ಯೊರ್ದನ್ ಕೊಳ್ಳ ಹಾಗೂ ಮೋವಾಬಿನ ತಪ್ಪಲಿಗೆ, ಉತ್ತರದಲ್ಲಿ ಹೆರ್ಮೋನಿಗೆ ತಲುಪಲು ಯೇಸುವು ಪ್ರಯಾಣ ಮಾಡಬೇಕಾಗಿತ್ತು. "ಲೋಕದ ಎಲ್ಲಾ ರಾಜ್ಯಗಳಿಗೆ" ನಡಿಸುವ ರಾಜಮಾರ್ಗಗಳು ದೃಷ್ಟಿಯಲ್ಲಿದ್ದವು (J. W. Shepard, *The Christ of the Gospels* [Grand Rapids, Mich.: Wm. B. Eerdmans Publishing Co., 1939], 73). [2]ಈ ಮೂರು ಶೋಧನೆಗಳು ನಲ್ವತ್ತು ದಿನಗಳ ಅವಧಿಯಲ್ಲಿ ಆತನ ಪವಿತ್ರ ಪ್ರಾಣದ ಮೇಲೆ ಸೈತಾನನು ಮಾಡಿದ ಶೋಧನೆಗಳ ಉದಾಹರಣೆಗಳು ಮಾತ್ರ ಎಂದು ಜೆ. ಓಸ್ವಾಲ್ಡ್ ಸ್ಯಾಂಡರ್ಸ ವಾದಿಸುತ್ತಾರೆ. "ಹಾಗೂ ಆತನು ನಲ್ವತ್ತು ದಿನ ಹಗಲು ಮತ್ತು ನಲ್ವತ್ತು ರಾತ್ರಿ ಉಪವಾಸ ಮಾಡಿದನಂತರ, ಆತನಿಗೆ ಹಸಿವೆಯಾಯಿತು" (ಮತ್ತಾಯ 4:2) ಎಂಬ ಮಾತುಗಳಿಂದ ಇದು ಊಹಿಸಲ್ಪಟ್ಟಿದೆ ಎಂದು ಅವರು ಹೇಳಿದ್ದಾರೆ. ಆತನು ಇಡೀ ನಲ್ವತ್ತು ದಿನಗಳ ಅವಧಿಯಲ್ಲಿ ಶೋಧಿಸಲ್ಪಟ್ಟನು. ಆದರೆ ಆತನು ಊಟ ಮಾಡುವದನ್ನು ಮರೆತು ಬಿಡುವಷ್ಟರ ಮಟ್ಟಿಗೆ ತನ್ನ ಆತ್ಮಿಕ ಸಂದಿಗ್ಧ ಪರಿಸ್ಥಿತಿಯಲ್ಲಿದ್ದನು ಹಾಗೆ ತುಂಬಿಕೊಂಡಿದ್ದನು. ನಲ್ವತ್ತು ದಿನಗಳ ಅಂತ್ಯದಲ್ಲಿ ಆತನಿಗೆ ಹಸಿವೆಯಾಯಿತು. ಅನಂತರ ಮೂರು ಪ್ರತಿನಿಧಿಕ ಪರೀಕ್ಷೆಗಳು ಬಂದವು. ಸ್ಯಾಂಡರ್ಸ ಅವರು ಈ ವಿಷಯವನ್ನು ಸಿದ್ಧಪಡಿಸಿ

ತೋಲಿಸಲಿಲ್ಲ. ನೋಡಿರಿ ಜೆ. ಓಸ್ವಾಲ್ಡ್ ಸ್ಯಾಂಡರ್ಸ್ ಅವರ *The Incomparable Christ* (Chicago: Moody Press, 1952), 58. ಡೊನಾಲ್ಡ ಗುತ್ರಿ ಅವರು ಹೀಗೆ ಬರೆದಿದ್ದಾರೆ, "ಮತ್ತಾಯ ಮತ್ತು ಲೂಕ ಅವರಿಂದ ನಮೂದಿಸಲ್ಪಟ್ಟ ಮೂರು ಶೋಧನೆಗಳು ಪೂರ್ತಿಯಾದವುಗಳೆಂದು ತಿಳಿಯಬಾರದು. ಆದರೆ ಉದಾಹರಣೆಗಳಾಗಿವೆ. ಸತತವಾಗಿ ಬರುವ ಶೋಧನೆಗಳ ವಿಷಯಗಳ ಸೂಚನಗಳಾಗಿವೆ (Donald Guthrie, *A Shorter Life of Christ* [Grand Rapids, Mich.: Zondervan, 1970], 81). [3]ಹೊಸ ಒಡಂಬಡಿಕೆಯಲ್ಲಿ "ಅಡವಿ" ಇಲ್ಲವೇ "ಅರಣ್ಯ" ಎಂದು ಉಪಯೋಗಿಸಲ್ಪಟ್ಟ ಪದವು ಮರುಭೂಮಿಯೆಂದು (ಮರುಳು ಭೂಮಿಯೆಂದು) ಯೋಚಿಸಬೇಕಾಗಿಲ್ಲ, ಆದರೆ ಜನ ನಿವಾಸದಿಂದ ದೂರವಾಗಿರುವ ಸ್ಥಳವನ್ನು ಸೂಚಿಸುತ್ತದೆ (ಮಾರ್ಕ 1:35). [4]Sanders, 57. [5]Sanders, 58. [6]ಪಾಪ ಮಾಡುವದನ್ನು ಯೇಸುವು ತಿರಸ್ಕರಿಸಿದ್ದಕ್ಕಾಗಿ ನಾವೆಷ್ಟೋ ಕೃತಜ್ಞತೆಯುಳ್ಳವರಾಗಿರಬೇಕಲ್ಲವೇ! [7]ಸೈತಾನನು ಕೆಂಪು ಸೂಟು ಧರಿಸಿ ಕೈಯಲ್ಲಿ ಕವಲು ಕೋಲನ್ನು ಹಿಡಿದುಕೊಂಡು ಯೇಸುವಿನ ಬಳಿಗೆ ಬಂದಿರುವ ಸಾಧ್ಯತೆಯಿಲ್ಲ. ಬಹುಶಃ ನಾವು ಶೋಧಿಸಲ್ಪಟ್ಟ ರೀತಿಯಲ್ಲಿಯೇ ಯೇಸುವು ಶೋಧಿಸಲ್ಪಟ್ಟಿರಬಹುದು. ಆತನ ವೈಯಕ್ತಿಕ ಸೇವೆಯು ಪ್ರಾರಂಭಿಸುವ ಮೊದಲು ಪ್ರಮುಖ ಯುದ್ಧವು ನಡೆಯಿತು. ಅದು ಸೈತಾನನಿಗಾಗಿ ಪ್ರಾಮುಖ್ಯವಾದ ಸಮಯವಾಗಿತ್ತು. [8]ಈ ಮೂರು ಶೋಧನೆಗಳ ದಾಖಲೆಯು ಯೇಸುವು ಮನುಷ್ಯನಿಗೆ ಸಾಮಾನ್ಯವಾದ ಪರೀಕ್ಷೆಗಳನ್ನು ಎದುರಿಸಿದನು. ಹಾಗೂ ಅವುಗಳನ್ನು ಸಂಪೂರ್ಣವಾಗಿ ಎದುರಿಸಿದನು ಎಂಬುದನ್ನು ನಮಗೆ ತೋರಿಸುತ್ತವೆ. ಶೋಧನೆಗಳನ್ನು ಅರ್ಥಮಾಡಿಕೊಳ್ಳುವುದು ಪ್ರತಿಯೊಬ್ಬ ಕ್ರೈಸ್ತನಿಗೆ ಅರ್ಥ ಗರ್ಭಿತವಾದದ್ದಾಗುತ್ತದೆ. ಯೇಸುವು ಪರಿಪೂರ್ಣವಾಗಿ ಪಾಪವಿಲ್ಲದವನಾಗಿದ್ದನು. ಇದರ ಬಗ್ಗೆ ನಮ್ಮ ತಿಳುವಳಿಕೆಯನ್ನು ಹೆಚ್ಚಿಸಬೇಕು. ಕ್ರಿಸ್ತನ ಸ್ವಂತ ಆಗಮನದಲ್ಲಿ ಪ್ರಕಟಿಸಲ್ಪಟ್ಟಂತೆ ಕ್ರಿಸ್ತನ ಯಜ್ಞದ ಬಗ್ಗೆ ನಮ್ಮ ಮೆಚ್ಚಿಕೆಯನ್ನು ಅದು ಆಳವಾಗಿಸಬೇಕು. ಈ ಶೋಧನೆಗಳಲ್ಲಿ ಲೋಕದ ಚರಿತ್ರೆಯಲ್ಲಿ ಸೈತಾನನನ್ನು ಎದುರಿಸಿ ಅವನನ್ನು ಸಂಪೂರ್ಣವಾಗಿ ಸೋಲಿಸಿದ ಕೇವಲ ಒಬ್ಬನ ಕಡೆಗೆ ನಾವು ನೋಡುತ್ತೇವೆ. [9]Sanders, 58. [10]Everett F. Harrison, *A Short Life of Christ* (Grand Rapids, Mich.: Wm. B. Eerdmans Publishing Co., 1968), 87.

[11]Sanders, 59. [12]ಮತ್ತಾಯನ ಬರಹದಲ್ಲಿ ಇದು ಎರಡನೆಯ ಶೋಧನೆಯಾಗಿದೆ; ಲೂಕನ ಬರಹದಲ್ಲಿ ಇದು ಮೂರನೆಯ ಶೋಧನೆಯಾಗಿರುತ್ತದೆ. [13]J. W. McGarvery and Philip Y. Pendleton, *The Fourfold Gospel* (Cincinnati, Ohio: The Standard Publishing Foundation, n.d), 96. [14]Sanders, 60. [15]Ibid.

© 2009 Truth for Today